ರಾಜ್ಯ ಮಟ್ಟದ ಎಸ್.ಎಸ್.ಎಲ್.ಸಿ. ಪೂರ್ವಸಿದ್ಧತಾ ಪರೀಕ್ಷೆ — 2025

**STATE LEVEL SSLC PREPARATORY EXAMINATION — 2025**

ಜಿಲ್ಲೆ : ವಿಜಯನಗರ-TA

**District : VIJAYANAGAR-TA**

# ವಿಷಯ : ಸಮಾಜ ವಿಜ್ಞಾನ

# Subject : SOCIAL SCIENCE

(ಕನ್ನಡ ಮಾಧ್ಯಮ / Kannada Medium)

**ವಿಷಯ ಸಂಕೇತ : 85-K** **Subject Code : 85-K**

ದಿನಾಂಕ : 04. 03. 2025 ] [ Date : 04. 03. 2025

ಗರಿಷ್ಠ ಅಂಕಗಳು : 80 ] [ Max. Marks : 80

---

ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.



Scanned with OKEN Scanner

**I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** **8 × 1 = 8**

1. 'ಕೇಸರಿ' ಪತ್ರಿಕೆಯನ್ನು ಪ್ರಕಟಿಸಿದವರು

   (A) ಗಾಂಧೀಜಿ (B) ದಾದಾಬಾಯಿ ನವರೋಜಿ

   (C) ಬಾಲಗಂಗಾಧರ ತಿಲಕ್ (D) ಗೋಪಾಲಕೃಷ್ಣ ಗೋಖಲೆ

2. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯನ್ನು ಜಾರಿಗೆ ತಂದವರು

   (A) ಕಾರ್ನ್‌ ವಾಲೀಸ್ (B) ಡಾಲ್‌ಹೌಸಿ

   (C) ವೆಲ್ಲೆಸ್ಲಿ (D) ವಾರನ್ ಹೇಸ್ಟಿಂಗ್ಸ್

3. 'ಭಾರತದ ಹೆಬ್ಬಾಗಿಲು' ಎಂದು ಕರೆಯಲ್ಪಡುವ ಬಂದರು

   (A) ಕೋಲ್ಕತ್ತಾ (B) ಗೋವಾ

   (C) ನವ ಮಂಗಳೂರು (D) ಮುಂಬೈ

4. ನಮ್ಮ ಸಂವಿಧಾನದ 24 ನೇ ವಿಧಿಯ ಉದ್ದೇಶ

   (A) ಅಸ್ಪೃಶ್ಯತೆಯ ನಿಷೇಧ (B) ವರದಕ್ಷಿಣೆಯ ನಿಷೇಧ

   (C) ಬಾಲಕಾರ್ಮಿಕತೆಯ ನಿಷೇಧ (D) ಬಾಲ್ಯವಿವಾಹ ನಿಷೇಧ



Scanned with OKEN Scanner

5. 'ಮಾನವಕುಲ ತಾನೊಂದೇ ವಲಂ' ಎಂದು ಹೇಳಿದವರು

(A) ರನ್ನ (B) ಪಂಪ

(C) ಜನ್ನ (D) ಪೊನ್ನ

6. ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರನ್ನು ನೇಮಿಸುವವರು

(A) ರಾಷ್ಟ್ರಾಧ್ಯಕ್ಷರು (B) ಉಪ ರಾಷ್ಟ್ರಾಧ್ಯಕ್ಷರು

(C) ಪ್ರಧಾನ ಮಂತ್ರಿಗಳು (D) ರಾಜ್ಯಪಾಲರು

7. ಇವುಗಳಲ್ಲಿ ಪ್ರತ್ಯಕ್ಷ ತೆರಿಗೆಗೆ ಉದಾಹರಣೆ

(A) ಆಮದು-ರಫ್ತು ತೆರಿಗೆ (B) ಸರಕು ಮತ್ತು ಸೇವಾ ತೆರಿಗೆ

(C) ವಿದೇಶಿ ಪ್ರವಾಸಿಗರ ಮೇಲಿನ ತೆರಿಗೆ (D) ಸಂಪತ್ತಿನ ತೆರಿಗೆ

8. ಮಾರ್ಚ್ 15 ರ ಮಹತ್ವ

(A) ವಿಶ್ವಗ್ರಾಹಕರ ಹಕ್ಕುಗಳ ದಿನ (B) ವಿಶ್ವ ಮಾನವ ಹಕ್ಕುಗಳ ದಿನ

(C) ವಿಶ್ವ ಪರಿಸರ ದಿನ (D) ವಿಶ್ವ ಜನಸಂಖ್ಯಾ ದಿನ

**II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **$8 \times 1 = 8$**

9. ಫ್ರಾನ್ಸಿಸ್ಕೊ ಡಿ ಆಲ್ಮೇಡ 'ನೀಲಿ ನೀರಿನ ನೀತಿ'ಯನ್ನು ಏಕೆ ಜಾರಿಗೆ ತಂದನು ?



Scanned with OKEN Scanner

10. ಹಲಗಲಿಯ ಬೇಡರ ದಂಗೆಗೆ ಮುಖ್ಯ ಕಾರಣವೇನು ?

11. ಸಾರ್ವಜನಿಕ ಆಡಳಿತದ ಪಿತಾಮಹ ಯಾರು ?

12. ಉದ್ಯಮಶೀಲತೆ ಎಂದರೇನು ?

13. ಸರ್ ಎಂ. ವಿಶ್ವೇಶ್ವರಯ್ಯರವರನ್ನು ಭಾರತದ ಆರ್ಥಿಕ ಯೋಜನೆಗಳ ಪಿತಾಮಹ ಎಂದು ಕರೆಯುತ್ತಾರೆ. ಏಕೆ ?

14. ಭಾರತದಲ್ಲಿ ಅತಿ ಹೆಚ್ಚು ದಾಖಲೆ ಮಳೆಯಾಗುವ ಪ್ರದೇಶ ಯಾವುದು ?

15. 'ಪ್ರಸವ ಪೂರ್ವ ಲಿಂಗ ಪರೀಕ್ಷೆ ಪ್ರತಿಬಂಧಕ ಕಾಯ್ದೆ ಜಾರಿಯಲ್ಲಿದೆ.' ಏಕೆ ?

16. ಅಲ್ಯುಮಿನಿಯಂ ಅನ್ನು 20ನೇ ಶತಮಾನದ 'ಅದ್ಭುತ ಲೋಹ'ವೆಂದು ಏಕೆ ಕರೆಯಲಾಗುತ್ತದೆ ?

**III.** ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : **8 × 2 = 16**

17. ಸಾರ್ವತ್ರಿಕ ಮಾನವ ಹಕ್ಕುಗಳನ್ನು ಭಾರತವು ನಿರಂತರವಾಗಿ ಪ್ರತಿಪಾದಿಸುತ್ತಾ ಬಂದಿದೆ. ಹೇಗೆ ?

ಅಥವಾ

ಕಳ್ಳ ಸಾಗಾಣಿಕೆಯು ರಾಷ್ಟ್ರೀಯ ಹಿತಾಸಕ್ತಿಗೆ ಮಾರಕವಾದದ್ದು. ಹೇಗೆ ?



Scanned with OKEN Scanner

18. ಚಿಪ್ಕೋ ಚಳವಳಿಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ.

**ಅಥವಾ**

ಬಾಲ್ಯ ವಿವಾಹಕ್ಕೆ ಕಾರಣಗಳನ್ನು ವಿವರಿಸಿ.

19. ಹೈದರಾಬಾದ್ ಸಂಸ್ಥಾನವನ್ನು ಭಾರತ ಒಕ್ಕೂಟಕ್ಕೆ ಹೇಗೆ ವಿಲೀನಗೊಳಿಸಲಾಯಿತು ?

20. ಬಂಗಾಳದಲ್ಲಿನ ದ್ವಿಸರ್ಕಾರ ಪದ್ಧತಿಯ ಬಗ್ಗೆ ಬರೆಯಿರಿ.

21. ಪ್ರವಾಹದಿಂದ ಉಂಟಾಗುವ ಪರಿಣಾಮಗಳನ್ನು ತಿಳಿಸಿ.

22. ಶಿವಾಲಿಕ್ ಶ್ರೇಣಿಯ ಲಕ್ಷಣಗಳನ್ನು ವಿವರಿಸಿ.

23. ಸುಗ್ಗಿ ಪೂರ್ವದ ತಂತ್ರಜ್ಞಾನವು ಹಸಿರು ಕ್ರಾಂತಿಯನ್ನು ಪ್ರಭಾವಿಸಿತು. ಹೇಗೆ ?

24. ಗ್ರಾಹಕ ಸಂರಕ್ಷಣಾ ಕಾಯ್ದೆಯ ಉದ್ದೇಶಗಳೇನು ?

**IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**9 × 3 = 27**

25. ಭಾರತದ ಇತಿಹಾಸದಲ್ಲಿ 19ನೇ ಶತಮಾನವನ್ನು 'ಭಾರತೀಯ ಪುನರುಜ್ಜೀವನ ಕಾಲ'ವೆಂದು ಕರೆಯಲಾಗಿದೆ. ಸಮರ್ಥಿಸಿ.

**ಅಥವಾ**

ಸಹಾಯಕ ಸೈನ್ಯ ಪದ್ಧತಿಯು ಬ್ರಿಟಿಷರಿಗೆ ಭಾರತೀಯ ರಾಜ್ಯಗಳನ್ನು ನಿಯಂತ್ರಣದಲ್ಲಿಡಲು ಸಹಾಯಕವಾಯಿತು. ಸಮರ್ಥಿಸಿ.

[ Turn over



Scanned with OKEN Scanner

26. ಭೂ ಬಳಕೆಯ ಪ್ರಕಾರಗಳನ್ನು ಪಟ್ಟಿ ಮಾಡಿ.

**ಅಥವಾ**

ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವಬೀರುವ ಅಂಶಗಳನ್ನು ಪಟ್ಟಿ ಮಾಡಿ.

27. ಬ್ಯಾಂಕ್ ಖಾತೆಗಳು ಜನರಿಗೆ ಹೇಗೆ ಉಪಯುಕ್ತವಾಗಿವೆ ? ವಿವರಿಸಿ.

**ಅಥವಾ**

ಉದ್ಯಮಿಗಳು ಆರ್ಥಿಕ ಕ್ಷೇತ್ರದ ಅಭಿವೃದ್ಧಿಗೆ ಹೇಗೆ ಸಹಕಾರಿಯಾಗಿದ್ದಾರೆ ? ವಿವರಿಸಿ.

28. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳ ಪಾತ್ರವೇನು ?

**ಅಥವಾ**

ಕೇಂದ್ರ ಸರ್ಕಾರದ ತೆರಿಗೆಯೇತರ ಆದಾಯದ ಮೂಲಗಳಾವುವು ?

29. ಜಾಗತಿಕ ಶಾಂತಿ ಸ್ಥಾಪನೆ ಹಾಗೂ ಸಮಸ್ಯೆಗಳ ನಿವಾರಣೆಯಲ್ಲಿ ವಿಶ್ವಸಂಸ್ಥೆಯ ಸಾಧನೆಯು ಮಹತ್ವವಾದದ್ದು. ಸಮರ್ಥಿಸಿ.

30. ಸಂಘಟಿತ ಮತ್ತು ಅಸಂಘಟಿತ ವಲಯದ ಕೆಲಸಗಾರರ ನಡುವಿನ ವ್ಯತ್ಯಾಸಗಳೇನು ?

31. 1919 ರ ಭಾರತ ಸರ್ಕಾರದ ಕಾಯ್ದೆಯ ಮುಖ್ಯಾಂಶಗಳನ್ನು ವಿವರಿಸಿ.

32. ಎರಡನೆಯ ಮಹಾಯುದ್ಧದ ಪರಿಣಾಮಗಳೇನು ?

33. ಮಣ್ಣಿನ ಸವೆತವು ಹಲವು ದುಷ್ಪರಿಣಾಮಗಳನ್ನುಂಟು ಮಾಡುತ್ತದೆ. ಹೇಗೆ ?



Scanned with OKEN Scanner

**V.** **ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**4 × 4 = 16**

34. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸರ ಪಾತ್ರವನ್ನು ವಿವರಿಸಿ.

**ಅಥವಾ**

ನಾಲ್ವಡಿ ಕೃಷ್ಣರಾಜ ಒಡೆಯರ ಸಾಧನೆಗಳನ್ನು ವಿವರಿಸಿ.

35. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಭಾರತೀಯರ ಮೇಲೆ ಹೇಗೆ ಪ್ರಭಾವಬೀರಿತು ?

36. ಅರಣ್ಯಗಳು ಮಾನವ ಮತ್ತು ಪರಿಸರಕ್ಕೆ ಬಹಳಷ್ಟು ಉಪಯುಕ್ತ ಸಂಪನ್ಮೂಲವಾಗಿವೆ. ಸಮರ್ಥಿಸಿ.

37. ಭಾರತದಲ್ಲಿ ಮಹಿಳೆಯರ ಸ್ಥಾನಮಾನವನ್ನು ಉತ್ತಮಪಡಿಸಲು ಕೈಗೊಂಡಿರುವ ಕ್ರಮಗಳಾವುವು ?

**VI.** 38. **ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಈ ಕೆಳಗಿನ ಯಾವುದಾದರೂ ಐದನ್ನು ಗುರುತಿಸಿ :**

**5 × 1 = 5**

a) ಕೋರಮಂಡಲ ತೀರ

b) ಭಾಕ್ರಾನಂಗಲ್ ಯೋಜನೆ

c) ಕಾಂಡ್ಲಾ ಬಂದರು

[ Turn over



Scanned with OKEN Scanner

d) ಜೆಮ್‌ಶೆಡ್‌ಪುರ

e) ನರ್ಮದಾ ನದಿ

f) ಗುವಾಹಟಿ

g) ಭದ್ರಾವತಿ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 38 ರ ಬದಲಿಗೆ)***

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಮುಖ್ಯ ಉದ್ದೇಶಗಳನ್ನು ವಿವರಿಸಿ. 5